		181	ವಕ್ರಾವಿ ಕ್ಯಾಂಪ್
		182	ಬೆಳಗಲ್
		183	ಮೆತ್ರಿ
		184	ಇಟ್ಟಗಿ
		185	ಬುಕ್ಕೆಸಾಗರ್
		186	ತರುಣಗಾರ
		187	ವಿಟ್ಟಲಪೂರ
	ಬಳ್ಳಾರಿ ಜಿಲ್ಲೆ	188	ಬಂಡರಿ
		189	ರುದ್ರಪಾದ
		190	ರಾರವಿ
		191	ಬೂದುಗುಪ್ಪಾ
		192	ರವಿಹಾಳ
		193	ಕೆ ಸುಗೂರ
		194	ಶಿರಿಗೇರಿ
4	ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ		–
5	ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ		–
	ಒಟ್ಟು		194

1525 (2216) ಶ್ರೀ ಶಿವಾರಮು ಬಿ (ಗಂಡಸಿ) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ರಾಜೀವ್ ಗಾಂಧಿ ವಿದ್ಯುದ್ದೀಕರಣ ಯೋಜನೆಯ ಪ್ರಸ್ತಾವನೆ ಮಂಜೂರಾತಿ ಪಡೆದಿರುವುದು ಯಾವಾಗ, ಇದರ ಯೋಜನೆಗೆ ಒದಗಿಸಿರುವ ಅನುದಾನವೆಷ್ಟು, (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು)

ಆ) ಅನುದಾನವನ್ನು ಪಡೆದಿರುವ ಮೂಲ ಯಾವುದು,

ಇ) ಇಲ್ಲಿಯವರೆವಿಗೂ ಖರ್ಚಾಗಿರುವ ಮೊತ್ತವೆಷ್ಟು,

ಈ) ಚೆಸ್‌ಕಾಂನಿಂದ ಹಾಸನ ಜಿಲ್ಲೆಯ ಯೋಜನೆಯನ್ನು ಪೂರ್ಣ ಗೊಳಿಸುವುದು ಯಾವಾಗ,

ಉ) ಗುತ್ತಿಗೆದಾರರು ನಕ್ಷೆ ಮತ್ತು ಅಂದಾಜಿನಂತೆ ಕಾಮಗಾರಿಯನ್ನು ಅನುಷ್ಠಾನಗೊಳಿಸುತ್ತಿದ್ದಾರೆಯೇ?

ಶ್ರೀ ಹೆಚ್ ಡಿ ರೇವಣ್ಣ (ಲೋಕೊಪಯೋಗಿ ಮತ್ತು ಇಂಧನ ಸಚಿವರು)

ಅ) ರಾಜ್ಯದಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುಧೀಕರಣ ಯೋಜನೆಯಡಿ ಮೊದಲನೆಯ ಹಂತದಲ್ಲಿ 17 ಜಿಲ್ಲೆಗಳಿಗೆ ಡಿಸೆಂಬರ್ –2005 ರಲ್ಲಿ ಅನುಮೋದನೆ ದೊರೆತಿರುತ್ತದೆ ಎರಡನೆಯ ಹಂತದಲ್ಲಿ 9 ಜಿಲ್ಲೆಗಳಿಗೆ ಡಿಸೆಂಬರ್–2006 ರಲ್ಲಿ ಅನುಮೋದನೆ ದೊರೆತಿರುತ್ತದೆ ಈ ಯೋಜನೆಯಡಿ ಮಂಜೂರಾಗಿರುವ ಒಟ್ಟು ಮೊತ್ತ ರೂ 613 37 ಕೋಟಿ ರೂ ಗಳು ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ

ಆ) ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಗೆ ಕೇಂದ್ರ ಸರ್ಕಾರವು ಗ್ರಾಮೀಣ ವಿದ್ಯುದೀಕರಣ ನಿಗಮದ ಮುಖಾಂತರ ಮಂಜೂರಾದ ಒಟ್ಟು ಮೊತ್ತದ ಶೇಕಡ 90 ರಷ್ಟು ಹಣವನ್ನು ಅನುದಾನವಾಗಿಯು, ಬಾಕಿ ಶೇಕಡ 10 ರಷ್ಟು ಹಣವನ್ನು ಸಾಲದ ರೂಪದಲ್ಲಿ ನೀಡುತ್ತದೆ

ಇ) ಫೆಬ್ರವರಿ – 2007 ರ ಅಂತ್ಯಕ್ಕೆ ಈ ಯೋಜನೆಯಡಿ ಖರ್ಚಾದ ಹಣದ ಒಟ್ಟು ಮೊತ್ತ ರೂ 240 04 ಕೋಟಿಗಳು

ಈ) ಈ ಯೋಜನೆಯಡಿಯಲ್ಲಿ ಹಾಸನ ಜಿಲ್ಲೆಯ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಜೂನ್ – 2007 ರ ಅಂತ್ಯದ ವೇಳೆಗೆ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ

ಉ) ಹೌದು

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಬಿ ಶಿವರಾಮು ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2216 ಕ್ಕೆ ಅನುಬಂಧ

ರಾಜ್ಯದಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯಡಿ ಒದಗಿಸಿರುವ ಅನುದಾನ ಜಿಲ್ಲಾವಾರು ವಿವರಗಳು

(ರೂ ಕೋಟಿಗಳಲ್ಲಿ)

ಕ್ರ ಸಂ	ಜಿಲ್ಲೆ	ಅನುದಾನದ ಮೊತ್ತ	ಸಾಲದ ಮೊತ್ತ	ಮಂಜೂರಾದ ಒಟ್ಟು ಮೊತ್ತ
	ಮೊದಲನೆ ಹಂತದಲ್ಲಿ ಮಂಜೂರಾದ ಜಿಲ್ಲೆಗಳು			
1	ಬೆಂಗಳೂರು (ಗ್ರಾ)	23 44	2 60	26 04
2	ಕೋಲಾರ	19 81	2 20	22 01
3	ತುಮಕೂರು	14 63	1 63	16 26
4	ಚಿತ್ರದುರ್ಗ	26 32	2 92	29 24
5	ದಾವಣಗೆರೆ	26 75	2 97	29 72
6	ಮೈಸೂರು	33 68	3 74	37 42
7	ಮಂಡ್ಯ	7 36	0 83	8 19
8	ಹಾಸನ	29 29	3 25	32 54
9	ಬೀದರ್	15 05	1 68	16 73
10	ರಾಯಚೂರು	19 60	2 18	21 78
11	ಧಾರವಾಡ	11 97	1 33	13 30

12	ಗದಗ	12 44	1 38	13 82
13	ಹಾವೇರಿ	17 66	1 96	19 62
14	ಬಿಜಾಪುರ	20 96	2 33	23 29
15	ಬಾಗಲಕೋಟೆ	23 01	2 56	25 57
16	ಬಳ್ಳಾರಿ	20 28	2 25	22 53
17	ಕೊಪ್ಪಳ	15 59	1 73	17 32
	ಒಟ್ಟು	**337 84**	**37 54**	**375 38**
	ಎರಡನೇ ಹಂತದಲ್ಲಿ ಮಂಜೂರಾದ ಜಿಲ್ಲೆಗಳು			
18	ಕೊಡಗು	30 25	3 36	33 61
19	ಚಾಮರಾಜನಗರ	8 76	0 97	9 73
20	ಬೆಳಗಾಂ	21 27	2 36	23 63
21	ಉತ್ತರ ಕನ್ನಡ	37 40	4 16	41 56
22	ಗುಲ್ಬರ್ಗಾ	35 32	3 93	39 25
23	ದಕ್ಷಿಣ ಕನ್ನಡ	22 14	2 46	24 60
24	ಉಡುಪಿ	13 01	1 44	14 45
25	ಶಿವಮೊಗ್ಗ	19 74	2 19	21 93
26	ಚಿಕ್ಕಮಗಳೂರು	26 31	2 92	29 23
	ಒಟ್ಟು	**214 20**	**23 79**	**237 99**
	ಒಟ್ಟು ಮೊತ್ತ	**552 04**	**61 33**	**613 37**